23)	ಹೊಸಹಳ್ಳಿ	–	1	–	1
24)	ಗೊಲ್ಲರಹಟ್ಟಿ	–	2	–	2
25)	ಯರನಪಾಳ್ಯ	–	2	–	2
26)	ಗೊಡೇನಹಳ್ಳಿ	–	4	–	4
27)	ಬಿದಲೂರು	–	3	–	3
	ಒಟ್ಟು	42	20	–	62
	ಒಟ್ಟು ಮೊತ್ತ	110	72	–	182

ಅನುಬಂಧ –2

3. ನೆಲಮಂಗಲ ಮತಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಭೂಸೇನಾ ನಿಗಮದವರು ಗ್ರಾಮವಾರು ನಿರ್ಮಿಸಿರುವ ಮನೆಗಳ ವಿವರಗಳು.

ಕ್ರಮ ಸಂಖ್ಯೆ	ವರ್ಷ	ಗ್ರಾಮ	ನಿರ್ಮಿಸಿರುವ ಮನೆಗಳ ಸಂಖ್ಯೆ	ನಿರ್ಮಿತ ಮನೆ ವಿಸ್ತೀರ್ಣ
1	1987–88	1) ತ್ಯಾಮಗೊಂಡ್ಲು	5	
		2) ತಾವರೆಕೆರೆ	5	
		3) ಬಸವನಹಳ್ಳಿ	45	20.11
		4) ಅರಳೆದಿಣ್ಣೆ	5	220 ಚದರ ಅಡಿಗಳು
		5) ತಟ್ಟೆಕೆರೆ	5	
		ಒಟ್ಟು	65	
2.	1988–89			
3.	1989–90	ಈ ಎರಡು ಸಾಲುಗಳಲ್ಲಿ ಹೊಸದಾಗಿ ಯಾವುದೇ ಮನೆಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.		

ಕಪ್ಪು ಹಲಗೆ ಯೋಜನೆಯಲ್ಲಿ ಕಟ್ಟಡ ನಿರ್ಮಾಣದ ಕಳಪೆ ಕೆಲಸ

453. ಶ್ರೀ ಬಿ. ಶಿವರಾಂ (ಗುಂಡಸಿ) ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಪ್ಪುಹಲಗೆ ಯೋಜನೆಯಲ್ಲಿ ಹಾಸನ ಜಿಲ್ಲೆಗೆ ಮಂಜೂರಾಗಿರುವ ಒಟ್ಟು ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಈ ಕಟ್ಟಡಗಳನ್ನು ಸರಿಯಾಗಿ ನಿರ್ಮಿಸದೇ, ಸುಭದ್ರವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದರ ಬಗ್ಗೆ ಸೂಕ್ತ ವಿಚಾರಣೆ ತನಿಖೆ ನಡೆಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) ಮಂಜೂರಾಗಿರುವ ಕೊಠಡಿಗಳ ಸಂಖ್ಯೆ

ಮೊದಲನೇ ಹಂತ	–	152 ಕೊಠಡಿಗಳು
ಎರಡನೇ ಹಂತ	–	1237 ಕೊಠಡಿಗಳು
	ಒಟ್ಟು	1389 ಕೊಠಡಿಗಳು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ತುಂಗಭದ್ರಾ ನದಿಯಿಂದ ಕರೂರು ಚೆಲಗೆರೆ ಮತ್ತು ಎಣ್ಣೆ ಹೊಸಹಳ್ಳಿ ಗ್ರಾಮಗಳಿಗೆ ನೀರು ಸರಬರಾಜು

32. ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ನದಿಯಿಂದ ಕರೂರು, ಚೆಲಗೇರಿ ಮತ್ತು ಎಣ್ಣೆ ಹೊಸಹಳ್ಳಿ ಗ್ರಾಮಗಳಿಗೆ ನಳದ ನೀರು ಸರಬರಾಜು ಮಾಡುವ ಪ್ರಸ್ತಾವನೆಯೇನಾದಾರೂ ಸರ್ಕಾರದ ಮುಂದಿರುವುದೆ?

ಆ) ಒಂದು ಖಾಸಗಿ ಕಂಪನಿಯು ಈ ಯೋಜನೆಯ ಶೇಕಡ 50 ರಷ್ಟು ಖರ್ಚನ್ನು ವಹಿಸಿ ಕೊಳ್ಳಲು ಮುಂದೆ ಬಂದಿರುವುದು ಸರ್ಕಾರಕ್ಕೆ ತಿಳಿದಿರುವುದೇ?

ಇ) ಹಾಗಿದ್ದಲ್ಲಿ ಈ ಯೋಜನೆಯನ್ನು ಮಂಜೂರು ಮಾಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು):–

ಅ) ಒಂದು ಮನವಿ ಪತ್ರವು ಬಂದಿದೆ

ಆ) ಕಂಪನಿಗೂ ಕೂಡ ನೀರನ್ನು ಒದಗಿಸುವ ಷರತ್ತಿನ ಮೇಲೆ ಒಂದು ಖಾಸಗಿ ಕಂಪನಿಯು ಯೋಜನೆಯ ಶೇಕಡಾ 50 ರಷ್ಟು ವೆಚ್ಚವನ್ನು ಭರಿಸಲು ಮುಂದೆ ಬಂದಿರುತ್ತದೆ.

ಇ) ಯೋಜನೆಯನ್ನು ಇನ್ನೂ ರೂಪಿಸಿಲ್ಲ.